# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ
## ಮಾದರಿ ಪ್ರಶ್ನೆ ಪತ್ರಿಕೆ: 2018–19
## ವಿಷಯ: ರಾಜ್ಯಶಾಸ್ತ್ರ

**ಪ್ರಶ್ನೆಗಳ ಸಂಖ್ಯೆ: 57** | **ವಿಷಯ ಸಂಕೇತ: 97K**
**ಸಮಯ: 3 ಗಂಟೆ 15 ನಿಮಿಷ** | **ಅಂಕಗಳು: 100**

---

**I ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಒಂದು ಸರಿಯಗಿದೆ. ಅದನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ:** **10x1=10**

1. ಭಾರತ ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರು.
   - ಎ) ಡಾ॥ ಬಾಬು ರಾಜೇಂದ್ರ ಪ್ರಸಾದ್
   - ಸಿ) ಸರ್ಧಾರ್ ವಲ್ಲಾಬಾಯಿ ಪಟೇಲ್
   - ಬಿ) ಸಚ್ಚಿದಾನಂದ ಸಿನ್ಹ
   - ಡಿ) ಡಾ. ಬಿ. ಆರ್. ಅಂಬೇಡ್ಕರ್
2. ಸಂವಿಧಾನ ರಚನಾ ಸಭೆಯಲ್ಲಿ ಧ್ಯೇಯ ನಿರ್ಣಯವನ್ನು ಮಂಡಿಸಿದವರು.
   - ಎ) ಮಹಾತ್ಮ ಗಾಂಧಿ
   - ಸಿ) ಜವಹಾರ್ ಲಾಲ್ ನೆಹರು
   - ಬಿ) ಡಾ॥ ಬಿ.ಆರ್.ಅಂಬೇಡ್ಕರ್
   - ಡಿ) ಗೋಪಾಲಸ್ವಾಮಿ ಅಯ್ಯಂಗಾರ್
3. ಡಾ॥ ಬಿ.ಆರ್. ಅಂಬೇಡ್ಕರ್‌ರವರು ಸಂವಿಧಾನದ ಆತ್ಮ ಮತ್ತು ಹೃದಯವಿದ್ದಂತೆ ಎಂದು ವರ್ಣಿಸಿರುವ ವಿಧಿ
   - ಎ) ವಿಧಿ – 31
   - ಬಿ) ವಿಧಿ – 32
   - ಸಿ) ವಿಧಿ – 33
   - ಡಿ) ವಿಧಿ – 34
4. ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಎರವಲು ಪಡೆದಿರುವುದು
   - ಎ) ಅಮೇರಿಕಾ ಸಂವಿಧಾನದಿಂದ
   - ಸಿ) ಐರ್ಲೇಂಡ್ ಸಂವಿಧಾನದಿಂದ
   - ಬಿ) ಕೆನಡಾ ಸಂವಿಧಾನದಿಂದ
   - ಡಿ) ಆಸ್ಟ್ರೇಲಿಯ ಸಂವಿಧಾನದಿಂದ
5. ಕೆಳಗಿನವುಗಳಲ್ಲಿ ಸರಿಯಾದ ಹೇಳಿಕೆ.
   - ಎ) ಲೋಕಸಭೆಯ ಸಭಾಪತಿಯು ಲೋಕಸಭೆಯ ಸದಸ್ಯರಿಂದ ಚುನಾಯಿತರಾಗುತ್ತಾರೆ.
   - ಬಿ) ಲೋಕಸಭೆಯ ಸಭಾಪತಿಯು ಆಡಳಿತ ಪಕ್ಷದ ಸದಸ್ಯರಿಂದ ಚುನಾಯಿತರಾಗುತ್ತಾರೆ.
   - ಸಿ) ಲೋಕಸಭೆಯ ಸಭಾಪತಿಯು ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರುಗಳಿಂದ ಆಯ್ಕೆಯಾಗುತ್ತಾರೆ.
   - ಡಿ) ಲೋಕಸಭೆಯ ಸಭಾಪತಿಯವರು ರಾಷ್ಟ್ರಪತಿಯವರಿಂದ ನೇಮಕವಾಗುತ್ತಾರೆ.
6. ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ನಿವೃತ್ತಿ ವಯಸ್ಸು.
   - ಎ) 62
   - ಬಿ) 63
   - ಸಿ) 64
   - ಡಿ) 65
7. ಹಣಕಾಸು ಮಸೂದೆಯನ್ನು ಮೊದಲು ಮಂಡಿಸುವ ಸದನ
   - ಎ) ವಿಧಾನ
   - ಬಿ) ವಿಧಾನ
   - ಸಿ) ರಾಜ್ಯ
   - ಡಿ) ಹಿರಿಯರ

| | | | | | | | | |
|---|---|---|---|---|---|---|---|---|
| | | ಪರಿಷತ್ತು | | ಸಭೆ | | ಸಭೆ | | ಸಭೆ |

8. ರಾಜ್ಯ ಸರ್ಕಾರವನ್ನು ವಜಾ ಮಾಡುವಂತೆ ರಾಷ್ಟ್ರಪತಿಗಳಿಗೆ ಶಿಫಾರಸ್ಸು ಮಾಡುವವರು.

| | | | | | | | |
|---|---|---|---|---|---|---|---|
| ಎ) | ಮುಖ್ಯಮ<br>ಂತ್ರಿಗಳು | ಬಿ) | ರಾಜ್ಯಪಾ<br>ಲರು | ಸಿ) | ಪ್ರಧಾನಮ<br>ಂತ್ರಿಗಳು | ಡಿ) | ಉಪರಾಷ್ಟ್ರ<br>ಪತಿಗಳು |

**ಪು.ತಿ.ನೋ**

9. ಜಿಲ್ಲಾ ಸೆಷನ್ಸ್ ನ್ಯಾಯಾಲಯಗಳಲ್ಲಿ ತೀರ್ಮಾನಿಸುವ ಮೊಕದ್ದಮೆಗಳು.

| | | | |
|---|---|---|---|
| ಎ) | ಕ್ರಿಮಿನಲ್ ಮೊಕದ್ದಮೆಗಳು | ಸಿ) | ರಾಜ್ಯಗಳ ನಡುವಿನ ಮೊಕದ್ದಮೆಗಳು |
| ಬಿ) | ಸಿವಿಲ್ ಮೊಕದ್ದಮೆಗಳು | ಡಿ) | ನೀರಿನ ವಿವಾದಗಳು |

10. ಕರ್ನಾಟಕದ ಪಂಚಾಯತ್ ರಾಜ್ ವ್ಯವಸ್ಥೆಯ ಪಿತಾಮಹ.

| | | | |
|---|---|---|---|
| ಎ) | ರಾಮಕೃಷ್ಣ ಹೆಗಡೆ | ಸಿ) | ಅಬ್ದುಲ್ ನಜೀರ್ ಸಾಬ್ |
| ಬಿ) | ಎಂ.ವೈ.ಘೋರ್ಪಡೆ | ಡಿ) | ಎಂ.ಪಿ.ಪ್ರಕಾಶ್ |

**II 11. 'ಎ' ಮತ್ತು 'ಬಿ' ಪಟ್ಟಿಯಲ್ಲಿರುವ ಅಂಶಗಳನ್ನು ಹೊಂದಿಸಿ ಬರೆಯಿರಿ: 1x5=5**

| 'ಎ' ಪಟ್ಟಿ | | 'ಬಿ' ಪಟ್ಟಿ | |
|---|---|---|---|
| a) | ವಿಧಾನ ಪರಿಷತ್ತು | i) | ವಿಧಾನಸಭೆಯ ಮುಖ್ಯಸ್ಥರು |
| b) | ವಿಧಾನ ಸಭೆ | ii) | ಆಡಳಿತ ಪಕ್ಷದ ಮುಖ್ಯಸ್ಥರು |
| c) | ರಾಜ್ಯಪಾಲರು | iii) | ನೈಜ ಮುಖ್ಯಸ್ಥರು |
| d) | ಮುಖ್ಯಮಂತ್ರಿ | iv) | ನಾಮಮಾತ್ರ ಮುಖ್ಯಸ್ಥರು |
| e) | ಸಭಾಪತಿ | v) | ಕೆಳಮನೆ |
| | | vi) | ಮೇಲ್ಮನೆ |
| | | vii) | ಸೇನಾ ದಂಡನಾಯಕ |

**III ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿ: 15x1=15**

12. ಏಕ ಪೌರತ್ವ ಎಂದರೇನು?
13. ಭಾರತವನ್ನು ಒಂದು ಸಾರ್ವಭೌಮ ರಾಷ್ಟ್ರವೆಂದು ಏಕೆ ಕರೆಯಾಲಾಗಿದೆ?
14. ಬಂಧೀ ಪ್ರತ್ಯಕ್ಷೀಕರಣ ಎಂದರೇನು?
15. ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಸಂವಿಧಾನದ ಎಷ್ಟನೇ ಭಾಗದಲ್ಲಿ ಅಳವಡಿಸಲಾಗಿದೆ ?
16. ಸುಗ್ರೀವಾಜ್ಞೆ ಎಂದರೇನು?
17. ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಯಾವ ವಿಧಿಗಳ ಅಡಿಯಲ್ಲಿ ವಿವರಿಸಲಾಗಿದೆ.
18. ಉದಾರವಾದಿ ತತ್ವಗಳೆಂದರೇನು?
19. ಸಮಾಜವಾದಿ ತತ್ವಗಳ ಮೂಲ ಉದ್ದೇಶವೇನು?
20. ಹಂಗಾಮಿ ಸಭಾಧ್ಯಕ್ಷ ಎಂದರೇನು?
21. ಸರ್ವೋಚ್ಛ ನ್ಯಾಯಾಲಯ ಯಾವಾಗ ಸ್ಥಾಪನೆಯಾಯಿತು?
22. ರಾಜ್ಯಪಾಲರನ್ನು ಯಾರು ನೇಮಕ ಮಾಡುತ್ತಾರೆ?
23. ಮಂತ್ರಿಗಳಿಗೆ ಪ್ರಮಾಣವಚನವನ್ನು ಯಾರು ಬೋಧಿಸುತ್ತಾರೆ?
24. ಕಂಟೋನ್ಮೆಂಟ್ ಬೋರ್ಡ್‌ಗಳೆಂದರೇನು?
25. ನಗರ ಪಾಲಿಕೆ ಎಂದರೇನು?
26. ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರನ್ನು ಯಾರು ನೇಮಕ ಮಾಡುತ್ತಾರೆ?

**IV ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ: 24x2=48**

27. ನಮ್ಮ ಸಂವಿಧಾನವನ್ನು ಬೃಹತ್ ಸಂವಿಧಾನ ಎಂದು ಕರೆಯಲು ಕಾರಣವೇನು?
28. ಪ್ರಸ್ತಾವನೆಯಲ್ಲಿರುವ ಧ್ಯೇಯ ಗುರಿಗಳನ್ನು ತಿಳಿಸಿ.
29. ಸ್ವಾತಂತ್ರ್ಯದಂತೆಯೇ ಸಮಾನತೆಯು ಮುಖ್ಯ. ಏಕೆ?
30. ಮಾಹಿತಿ ಹಕ್ಕು ಕಾಯ್ದೆಯ ಮಹತ್ವ ತಿಳಿಸಿ.
31. ಗಾಂಧಿವಾದಿ ತತ್ವಗಳು ಯಾವುವು?
32. ಲೋಕಸಭೆಯ ಕಾರ್ಯಾಂಗೀಯ ಅಧಿಕಾರಗಳನ್ನು ತಿಳಿಸಿ.
33. ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರಾಗಲು ಇರುವ ಅರ್ಹತೆಗಳಾವುವು?
34. ವಿಧಾನ ಪರಿಷತ್ತು ಹೇಗೆ ಉಪಯುಕ್ತವಾಗಿದೆ?
35. ಉಚ್ಛ ನ್ಯಾಯಾಲಯವು ಅಧೀನ ನ್ಯಾಯಾಲಯಗಳನ್ನು ಹೇಗೆ ನಿಯಂತ್ರಿಸುತ್ತದೆ?

36. ಗ್ರಾಮ ಸಭೆಯ ರಚನೆ ಮತ್ತು ಕಾರ್ಯಗಳನ್ನು ವಿವರಿಸಿ.
37. ಜಿಲ್ಲಾ ಪಂಚಾಯಿತಿಯ ಹಣಕಾಸಿನ ಮೂಲಗಳನ್ನು ತಿಳಿಸಿ.
38. ಕಂದಾಯ ನ್ಯಾಯಾಲಯಗಳ ಶ್ರೇಣಿಯನ್ನು ಬರೆಯಿರಿ.
39. ಕೇಂದ್ರ ಲೋಕಸೇವಾ ಆಯೋಗ ಹೇಗೆ ರಚನೆಯಾಗಿದೆ?
40. ಕರ್ನಾಟಕ ಲೋಕಸೇವಾ ಆಯೋಗದ 2 ಕಾರ್ಯಗಳನ್ನು ಬರೆಯಿರಿ.
41. ನಮ್ಯ ಸಂವಿಧಾನ ಮತ್ತು ಅನಮ್ಯ ಸಂವಿಧಾನಕ್ಕಿರುವ ವ್ಯತ್ಯಾಸ ತಿಳಿಸಿ.
42. ಪ್ರಸ್ತಾವನೆಯ ಮೂಲ ತತ್ವಗಳನ್ನು ತಿಳಿಸಿ.
43. ವ್ಯಕ್ತಿ ಘನತೆ ಮತ್ತು ಭ್ರಾತೃತ್ವದ ಕುರಿತು ಬರೆಯಿರಿ.
44. ಮೂಲಭೂತ ಹಕ್ಕುಗಳ ಲಕ್ಷಣಗಳಾವುವು?
45. ಶೋಷಣೆಯ ವಿರುದ್ಧದ ಹಕ್ಕಿನ ಮಹತ್ವ ವಿವರಿಸಿ.
46. ರಾಜ್ಯ ನೀತಿ ನಿರ್ದೇಶಕ ತತ್ವಗಳ ಪ್ರಾಮುಖ್ಯತೆಯನ್ನು ತಿಳಿಸಿರಿ.
47. ಭಾರತದ ರಾಷ್ಟ್ರಪತಿಯವರ ಚುನಾವಣಾ ವಿಧಾನವನ್ನು ವಿವರಿಸಿ.
48. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಅಗತ್ಯತೆಯನ್ನು ತಿಳಿಸಿರಿ.
49. ರಾಜ್ಯಪಾಲರ ವಿವೇಚನಾಧಿಕಾರಗಳಾವವು?
50. ವಿಧಾನ ಸಭೆಯ ಅಧಿಕಾರ ಮತ್ತು ಕಾರ್ಯಗಳನ್ನು ತಿಳಿಸಿರಿ.

**V ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಆರು ವಾಕ್ಯಗಳಲ್ಲಿ ಉತ್ತರಿಸಿ: 6x3=18**

51. ಭಾರತದ ಸಂವಿಧಾನದ ಪ್ರಧಾನ ಲಕ್ಷಣಗಳನ್ನು ತಿಳಿಸಿ.
52. ಭಾರತೀಯ ಸಂವಿಧಾನದ 19ನೇ ವಿಧಿಯನ್ವಯ ನೀಡಿರುವ ಆರು ಸ್ವಾತಂತ್ರ್ಯಗಳಾವುವು?
53. ರಾಷ್ಟ್ರಪತಿಯವರ ತುರ್ತುಪರಿಸ್ಥಿತಿಯ ಅಧಿಕಾರಗಳನ್ನು ವಿವರಿಸಿ
54. ರಾಜ್ಯಸಭೆಯು ಹೇಗೆ ರಚನೆಯಾಗುತದೆ?
55. ಸರ್ವೋಚ್ಚ ನ್ಯಾಯಾಲಯದ ಅಧಿಕಾರ ಮತ್ತು ಕಾರ್ಯಗಳಾವುವು?
56. ರಾಜ್ಯಪಾಲರ ಶಾಸನೀಯ ಅಧಿಕಾರಗಳನ್ನು ವಿವರಿಸಿ.

**V ಈ ಕೆಳಗಿನ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ: 1x4=4**

57. ಪ್ರಧಾನಮಂತ್ರಿಯು 'ಮಂತ್ರಿಮಂಡಲದ ಕೇಂದ್ರ ಬಿಂದು'ವಾಗಿದ್ದಾರೆ ಸಮರ್ಥಿಸಿ.

*****